

# ಟ್ಯಾಟೂ ಬೈಕ್

ಹಿಂದಿನ ಕಾಲದಲ್ಲಿದ್ದ ಹಚ್ಚೆ ಹಾಕಿಸಿಕೊಳ್ಳುವ ಕಲೆ ಈಗಿನ ಯುವಜನರ ಟ್ಯಾಟೂ ಬರೆಸಿಕೊಳ್ಳುವ ಕ್ರೇಜ್ ಆಗಿದೆ. ಕೆಲವರು ಒಂದೇ ಒಂದು ಚಿತ್ರವನ್ನು ಮೈಮೇಲೆ ಬಿಡಿಸಿಕೊಂಡಿದ್ದರೆ, ಇಡೀ ಮೈತುಂಬಾ ಟ್ಯಾಟೂ ಹಾಕಿಸಿಕೊಳ್ಳುವ ಭೂಪರೂ ಇದ್ದಾರೆ. ಇನ್ನು ಸವಾರಿ ಮಾಡುವ ಬೈಕ್‌ಗೂ ಸಹ ಟ್ಯಾಟೂ ಚಿತ್ರವನ್ನು ಏರ್‌ಬ್ರಷ್‌ನಿಂದ ಬರೆಯಲಾಗುತ್ತದೆ. ಆದರೆ ರೆಸಿಡಿವಿಸ್ಟ್ ಹೆಸರಿನ ಬೈಕ್ ಮಾತ್ರ ಅತ್ಯಂತ ವಿಶಿಷ್ಟ. ಯಾಕೆಂದರೆ ಇದರ ಚಕ್ರಗಳು, ಕುಳಿತುಕೊಳ್ಳುವ ಆಸನ, ಟ್ಯಾಂಕ್ ಎಲ್ಲವೂ ಸಂಪೂರ್ಣವಾಗಿ ಟ್ಯಾಟೂಮಯ.

ಇದೆಲ್ಲ ಸಾಧ್ಯವಾಗಿದ್ದು, ಮನುಷ್ಯನ ಚರ್ಮವನ್ನು ಹೋಲುವ ತಿಳಿಬಣ್ಣದ ತೊಗಲಿನ ಜೊತೆ ಬೈಕ್‌ನ ತಾಂತ್ರಿಕತೆ ಮೇಳೈಸಿದ್ದರಿಂದ. ಪೋಲಂಡ್‌ನ ಟೊಮಸ್ಜ್ ಲೆಚ್ ಮತ್ತು ಕ್ರಜ್ಯೆಟೊಫ್ ಕ್ರೊಲಕ್ ಎಂಬ ಟ್ಯಾಟೂ ಕಲಾವಿದರು ಬರೋಬ್ಬರಿ 250 ಗಂಟೆಗಳನ್ನು ವ್ಯಯಿಸಿ ಬೈಕ್ ತುಂಬೆಲ್ಲಾ ಟ್ಯಾಟೂ ಚಿತ್ರಿಸಿದ್ದಾರೆ. ಇದಕ್ಕಾಗಿ ವಿಶ್ವ ಪ್ರಸಿದ್ಧ ಚೆಯ್ನೆ ಪ್ರೊಫೆಷನಲ್ ಟ್ಯಾಟೂ ಸಾಧನಗಳ ಪೂರೈಕೆ ಮಾಡುವವರ ಉಪಕರಣಗಳನ್ನು ಬಳಸಿದ್ದಾರೆ. ಗೇಮ್ ಓವರ್ ಸೈಕಲ್ಸ್ ಎಂಬ ಕಂಪನಿ ಈ ಬೈಕ್ ತಯಾರಿಸಿದೆ.

ಟ್ಯಾಟೂ ಬೈಕ್ ನಿರ್ಮಾಣ, ಇದುವರೆಗೆ ಮಾಡಿದ್ದಕ್ಕಿಂತ ಬಹಳ ಕಠಿಣ. ಯಾಕೆಂದರೆ ಟ್ಯಾಟೂವಿನಂತೆ ಕಾಣುವ ಯಂತ್ರಗಳನ್ನೆಲ್ಲಾ ಕಾರ್ಯನಿರ್ವಹಿಸುವಂತೆ ಮಾಡುವುದು ದೊಡ್ಡ ಸವಾಲು ಆಗಿತ್ತು ಎಂಬುದಾಗಿ ಪಾಲಿಶ್ ಕಂಪನಿಯು ತನ್ನ ಫೇಸ್ ಬುಕ್ ಪುಟದಲ್ಲಿ ಹೇಳಿಕೊಂಡಿದೆ. ಅಲ್ಲದೆ ಚೆಯ್ನೆ ಬೈಕ್‌ನ ಥೀಮ್, ಮೋಟರ್‌ಬೈಕ್‌ಗಳ ಮತ್ತು ಟ್ಯಾಟೂವಿನ ಸಾಂಪ್ರದಾಯಿಕ ಸಂಬಂಧವನ್ನು ಕಲ್ಪಿಸುತ್ತದೆ ಎಂದೂ ಸಹ ಅದರಲ್ಲಿ ಸೇರಿಸಿದೆ.

ಅಮೆರಿಕಾದ ಬೈಕ್ ಸವಾರರು, ತಮ್ಮ ಸ್ವಭಾವವನ್ನು ತೋರಿಸಲು ಮತ್ತು ಲೈಫ್ ಸ್ಟೈಲ್ ಹಾಗೂ ಸಾಮಾಜಿಕ ಮನೋವೃತ್ತಿಯನ್ನು ಬಿಂಬಿಸಲು ಟ್ಯಾಟೂವನ್ನು ಬರೆಸಿಕೊಳ್ಳುತ್ತಾರಂತೆ. ಗೇಮ್ ಓವರ್ ಸೈಕಲ್ಸ್‌ನ ಮಾಲಿಕ ಸ್ಟಾನಿಸ್ಲಾ ಮೈಸ್ಲೊಜ್ವಿಸ್ಕಿಯು ಇದರ ಬಗ್ಗೆ ಯಾರು ಏನೇ ಹೇಳಲಿ ,ಈ ಬೈಕ್ ಮಾತ್ರ ಅದ್ಭುತ ಎಂದು ಹೆಮ್ಮೆಯಿಂದ ಹೇಳಿದ್ದಾನೆ.

ಈ ವಿಶಿಷ್ಟ ಟ್ಯಾಟೂ ಬೈಕ್ ಇತ್ತೀಚೆಗೆ ಜರ್ಮನಿಯಲ್ಲಿ ನಡೆದ ಕಸ್ಟಮ್ ಬೈಕ್ ಷೋನಲ್ಲಿ ಪ್ರದರ್ಶನಗೊಂಡು ಅತ್ಯುತ್ತಮ ಪೈಂಟ್/ಏರ್‌ಬ್ರಷ್ ವಿಭಾಗದಲ್ಲಿ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ.

■ ವಿನಯ್‌ಕುಮಾರ್ ಬಿ.ಹೆಚ್



